# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 304 | Pages. 2 | Date: 28-10-2025, TUESDAY | RNI NO: KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 304 – ಪುಟಗಳು : 2 | 28-10-2025 ಮಂಗಳವಾರ | Ph: 8762954248 | ದರ : ₹1


# ಸೂಕ್ತ ಪರಿಹಾರ ಕೊಟ್ಟರಷ್ಟೇ ರಸ್ತೆಗೆ ಭೂಮಿ

## ಬೆಂಡೆಕೆರೆ ರೈತರ ಬಿಗಿಪಟ್ಟು | ಜಿಲ್ಲಾಧಿಕಾರಿ ಮಧ್ಯಸ್ಥಿಕೆ | ಇಂದು ಹಾಸನದಲ್ಲಿ ಸಭೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಸೀಕೆರೆ: ತುಮಕೂರು-ಶಿವಮೊಗ್ಗ ಮಾರ್ಗದ ಚತುಷ್ಪಥ ರಾಷ್ಟ್ರೀಯ ಹೆದ್ದಾರಿ (206) ಕಾಮಗಾರಿಗೆ ಸ್ವಾಧೀನಪಡಿಸಿಕೊಳ್ಳುವ ಭೂಮಿಗೆ ನ್ಯಾಯಯುತ ಪರಿಹಾರ ಕೊಡಬೇಕೆಂದು ಆಗ್ರಹಿಸಿ ಜೆಡಿಎಸ್ ಮುಖಂಡ ಎನ್.ಆರ್. ಸಂತೋಷ್ ನೇತೃತ್ವದಲ್ಲಿ ಸೋಮವಾರ ರೈತರು ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ ಬೆಂಡೆಕೆರೆ ಗ್ರಾಮಕ್ಕೆ ಭಾರೀ ಪೊಲೀಸ್ ಭದ್ರತೆ ನಡುವೆ ಕಾಮಗಾರಿಗೆ ಮುಂದಾದಾಗ ಅಲ್ಲಿಗೆ ದೌಡಾಯಿಸಿದ 500ಕ್ಕೂ ಹೆಚ್ಚು ರೈತರು ಕಾಮಗಾರಿಗೆ ಅಡ್ಡಿಪಡಿಸಿದರು. ಪ್ರತಿಭಟನೆ ವಿಚಾರ ತಿಳಿದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಭೇಟಿ ನೀಡಿ ರೈತರ ಮನವೊಲಿಸುವಲ್ಲಿ ಯಶಸ್ವಿಯಾದರು.

ಜೆಡಿಎಸ್ ಮುಖಂಡ ಎನ್.ಆರ್. ಸಂತೋಷ್ ಮಾತನಾಡಿ, ಭೂಮಿಗೆ ನ್ಯಾಯಯುತ ಪರಿಹಾರ ಕೇಳಿದರೆ ಪೊಲೀಸರ ಜೊತೆ ಬಂದಿದ್ದೀರಿ, ನೀವು ಒಂದು ಹೆಜ್ಜೆ ಮುಂದಿಟ್ಟರೆ, ನಾವು ಎರಡು ಹೆಜ್ಜೆ ಇಡುತ್ತೇವೆ. ರೈತರ ತಾಳ್ಮೆ ಪರೀಕ್ಷೆ ಮಾಡಬೇಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಲೋಕಸಭಾ ಸದಸ್ಯರಾಗಿದ್ದ ಪ್ರಜ್ವಲ್ ರೇವಣ್ಣ, ಮಾಜಿ ಸಚಿವ ಹೆಚ್.ಡಿ.ರೇವಣ್ಣ ಹಾಗೂ ಜಿಲ್ಲಾಧಿಕಾರಿ ಸಮಕ್ಷಮದಲ್ಲಿ ಕಳೆದ ವರ್ಷ ಸಭೆ ನಡೆಸಿ ಪ್ರತಿ ಗುಂಟೆ ಜಮೀನಿಗೆ 36 ಸಾವಿರ ರೂ. ಪರಿಹಾರ ನೀಡಲು ಒಪ್ಪಿಗೆ ನೀಡಲಾಗಿತ್ತು. ಈಗ ಕೇವಲ 11,232 ರೂ. ನೀಡುತ್ತಿರುವುದು ಸರಿಯಲ್ಲ. ನುಡಿದಂತೆ ನಡೆಯಬೇಕು ಇಲ್ಲವೇ ಕೆಲಸ ನಿಲ್ಲಿಸಬೇಕು. ನ್ಯಾಯ ದೊರೆಯುವವರೆಗೂ ಹೋರಾಟದಿಂದ ಹಿಂದೆ ಸರಿಯುವುದಿಲ್ಲ. ಮುನ್ಸೂಚನೆ ನೀಡದೇ ಏಕಾಏಕಿ ಯಂತ್ರೋಪಕರಣಗಳೊಂದಿಗೆ ಲಗ್ಗೆಯಿಟ್ಟರೆ ನಾವು ಹೆದರುವುದಿಲ್ಲ ಎಂದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ಬಲವಂತವಾಗಿ ಭೂಮಿ ಪಡೆಯುವ ಉದ್ದೇಶ ನಮ್ಮದಲ್ಲ. ಅಭಿವೃದ್ಧಿ ಕೆಲಸಗಳಿಗೆ ಅಡ್ಡಿ ಮಾಡುವುದರಿಂದ ಪ್ರಗತಿ ಕುಂಠಿತವಾಗುತ್ತದೆ. ನಿಮಗೆ ದೊರಕಬೇಕಿರುವ ಪರಿಹಾರ ನೀಡಲು ಕಾನೂನಿನ ಅಡಿಯಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. ಶಾಂತಿಯಿಂದ ಸಹಕಾರ ನೀಡಬೇಕು ಎಂದು ಕೋರಿದರು.

ಈ ವೇಳೆ ರೈತ ಮುಖಂಡರಾದ ಅಶೋಕ್, ಪರಮೇಶ್, ಕುಮಾರಣ್ಣ ಮಾತನಾಡಿ, ಜೀವ ಬಿಟ್ಟೇವು, ಭೂಮಿ ಕೊಡೆವು, ನ್ಯಾಯಯುತ ಪರಿಹಾರ ಕೊಡಿ, ಇಲ್ಲವೇ ಜಾಗ ಖಾಲಿ ಮಾಡಿ, ಬಲವಂತದ ಕಾಮಗಾರಿಗೆ ಮುಂದಾದರೆ ಹೆಣಗಳ ಮೇಲೆ ಟಿಪ್ಪರ್, ರೋಲರ್ ಹತ್ತಿಸಿದರೂ ಹೆದರುವ ಪ್ರಶ್ನೆಯಿಲ್ಲ. ಏಕಾಏಕಿ ಕಾಮಗಾರಿ ನಡೆಸಲು ಮುಂದಾಗಿರುವುದು ಯಾವ ನ್ಯಾಯ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ಅರಿತ ಜಿಲ್ಲಾಧಿಕಾರಿ ಲತಾಕುಮಾರಿ, ನಿಮ್ಮ ಅಹವಾಲನ್ನು ಲಿಖಿತ ರೂಪದಲ್ಲಿ ಸಲ್ಲಿಸಿ, ಸರ್ಕಾರಿ ಭೂಮಿಯಲ್ಲಿ ಉದ್ದೇಶಿತ ಕಾಮಗಾರಿಗೆ ಮಾಡಿ ಎಂದು ಅಧಿಕಾರಿಗಳಿಗೆ ಹೇಳಿದರು.

ರೈತರ ಮನೆಗೆ ತೆರಳಿದ ಜಿಲ್ಲಾಧಿಕಾರಿ ಅವರು ಯೋಗ ಕ್ಷೇಮ ವಿಚಾರಿಸಿ ಉಪಾಹಾರ ಸೇವಿಸಿದರು. ಅಗತ್ಯ ದಾಖಲೆಗಳೊಂದಿಗೆ ಮಂಗಳವಾರ ಕಚೇರಿಗೆ ಬನ್ನಿರಿ ಎಂದು ಆಹ್ವಾನಿಸಿದರು. ಅದರಿಂದ ಸಮಾಧಾನಗೊಂಡ ರೈತರು, ಸರ್ಕಾರಿ ಭೂಮಿಯಲ್ಲಿ ಕೆಲಸ ಮಾಡಲು ನಮ್ಮ ತಕರಾರಿಲ್ಲ. ಆದರೆ ಪರಿಹಾರ ನೀಡುವವರೆಗೂ ಭೂಮಿ ಬಿಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದರಿಂದ ಪರಿಸ್ಥಿತಿ ತಿಳಿಯಾಯಿತು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿಶೇಷ ಭೂ ಸ್ವಾಧೀನಾಧಿಕಾರಿ ಧರ್ಮಪಾಲ್, ತಹಶೀಲ್ದಾರ್ ಎಂ.ಜಿ.ಸಂತೋಷ್ ಕುಮಾರ್, ಮುಖಂಡರಾದ ಸುರೇಶ್, ಭೈರಗೊಂಡನಹಳ್ಳಿ ಉಮೇಶ್, ಶಿವಮೂರ್ತಿ, ರಾಜಣ್ಣ, ವಿಜಯಕುಮಾರ್, ಚನ್ನೇಗೌಡ ಇತತರರಿದ್ದರು.

ಡಿವೈಎಸ್‌ಪಿ ಬಿ.ಆರ್.ಗೋಪಿ, ಗ್ರಾಮಾಂತರ ಸಿಪಿಐ ಅರುಣ್ ಕುಮಾರ್ ಹಾಗೂ ಬಾಣಾವರ ಪಿಎಸ್‌ಐ ಸುರೇಶ್ ನೇತೃತ್ವದಲ್ಲಿ ಮುಂಜಾಗ್ರತಾ ಕ್ರಮವಾಗಿ ಬಿಗಿ ಬಂದೋಬಸ್ತ್ ಒದಗಿಸಲಾಗಿತ್ತು.

# ನೆರೆ ಹಾನಿ ಪ್ರದೇಶಕ್ಕೆ ಸಂಸದ ಶ್ರೇಯಸ್ ಭೇಟಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಕಲಗೂಡು: ಕಳೆದ ಒಂದು ವಾರದಿಂದ ಸುರಿದ ನಿರಂತರ ಮಳೆಯಿಂದ ಹಾನಿಗೀಡಾದ ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ಸಂಸದ ಶ್ರೇಯಸ್ ಪಟೇಲ್ ಸೋಮವಾರ ಭೇಟಿ ಮಾಹಿತಿ ಪಡೆದರು.

ಅ. 24ರ ಮಂಗಳವಾರ ಮನೆ ಗೋಡೆ ಕುಸಿದು ಮೃತಪಟ್ಟ ಮತ್ತಿಗೋಡು ಗ್ರಾಮದ ಜವರಮ್ಮ ಅವರ ಮನೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಮಳೆಗಿದ್ದಾಗಲೇ ಮನೆ ಗೋಡೆ ಕುಸಿದಿರುವುದು ನೋವಿನ ವಿಚಾರ. ಕುಟುಂಬಕ್ಕೆ ಸೂಕ್ತ ಪರಿಹಾರ ಕಲ್ಪಿಸುವುದರ ಜೊತೆಗೆ ಮನೆ ನಿರ್ಮಿಸಿಕೊಡಲು ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಚೋಳೇನಹಳ್ಳಿ, ನೈಗೆರೆ, ಪಾರಸನಹಳ್ಳಿ, ಸೀಬಳ್ಳಿ ಹಾಗು ಕೊಣನೂರಿಗೆ ಭೇಟಿ ನೀಡಿದರು. ಅನೇಕ ಕಡೆ ಕೆರೆ ಕೋಡಿ ಒಡೆದು ಜಮೀನಿಗೆ ನೀರು ನುಗ್ಗಿದೆ. ರಸ್ತೆಗಳೆಲ್ಲಾ ಜಲಾವೃತವಾಗಿ ಸಂಚಾರಕ್ಕೆ ಅಡಚಣೆಯಾಗಿದೆ. ಅಧಿಕಾರಿಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕ್ರಮ ವಹಿಸಬೇಕೆಂದು ಅಧಿಕಾರಿಗಳಿಗೆ ಹೇಳಿದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಪಿ.ಶ್ರೀಧರ್ ಗೌಡ, ತಹಶೀಲ್ದಾರ್ ಸೌಮ್ಯ ಮತ್ತಿತರರಿದ್ದರು.

# ಹೆಂಡತಿ ಮೇಲೆ ಕುಡುಗೋಲಿನಿಂದ ಹಲ್ಲೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಮದ್ಯ ಸೇವಿಸಲು 100 ರೂ. ಕೊಡಲಿಲ್ಲವೆಂದು ಮದ್ಯವ್ಯಸನಿ ಪತಿಯು ಪತ್ನಿ ಮೇಲೆ ಕುಡುಗೋಲಿನಿಂದ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ದಡದಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಚನ್ನಾಜಮ್ಮ ಗಾಯಾಳು. ಚಂದ್ರ ಎಂಬಾತ ಭಾನುವಾರ ಹಲ್ಲೆ ನಡೆಸಿದ್ದು ಗಂಭೀರ ಗಾಯಗೊಂಡಿರುವ ಮಹಿಳೆಯನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಜಮೀನಿನಲ್ಲಿ ಜೋಳ ಮುರಿಯುತ್ತಿದ್ದಾಗ ಅಲ್ಲಿಗೆ ಬಂದ ಚಂದ್ರ ಮದ್ಯ ಸೇವಿಸಲು 100 ರೂ. ಕೊಡುವಂತೆ ಕೇಳಿದ್ದಾನೆ. 100 ರೂ. ಕೊಟ್ಟ ಬಳಿಕ ಮತ್ತೆ 100 ರೂ. ಕೊಡಬೇಕೆಂದು ಹಠ ಹಿಡಿದಿದ್ದಾನೆ. ಅದಕ್ಕೆ ಮಹಿಳೆ ಒಪ್ಪದೇ ಇದ್ದರಿಂದ ಅಲ್ಲೇ ಬಿದ್ದಿದ್ದ ಕುಡುಗೋಲನ್ನು ತೆಗೆದುಕೊಂಡು ಕುತ್ತಿಗೆ, ಎರಡೂ ಕಿವಿ, ಕಣ್ಣು, ಬಾಯಿಯ ಹತ್ತಿರ, ಕೈಗಳಿಗೆ ಕುಡುಗೋಲಿನಿಂದ ಕೊಚ್ಚಿದ್ದಾನೆ. ಅಲ್ಲೇ ಇದ್ದ ಚನ್ನಾಜಮ್ಮ ಅವರ ತಾಯಿ ಶಿವಮ್ಮ ಹಾಗೂ ಇತರರು ಜಗಳ ಬಿಡಿಸಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಯೋನಿವೃತ್ತಿ ಹೊಂದಿದ ರೈಲ್ವೆ ಇಲಾಖೆ ನೌಕರನಿಗೆ ಬೀಳ್ಕೊಡುಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಅರಸೀಕೆರೆ: ರೈಲ್ವೆ ಇಲಾಖೆಯ ಟಿಟಿಯಾಗಿ ಸುದೀರ್ಘ ಸೇವೆ ಸಲ್ಲಿಸಿ ವಯೋನಿವೃತ್ತರಾದ ಮಂಜುನಾಥ್ ಅವರಿಗೆ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಅವರ ಸ್ನೇಹಿತರ ಬಳಗದಿಂದ ಬೀಳ್ಕೊಡಲಾಯಿತು.

ರೈಲ್ವೆ ಇಲಾಖೆಯ ಅನುಗ್ರಹ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಮಂಜುನಾಥ್ ಅವರ ಹಿತೈಷಿಗಳು ರೈಲ್ವೆ ಇಲಾಖೆಯಲ್ಲಿ ಮಂಜುನಾಥ್ ಅವರು ಸಲ್ಲಿಸಿದ ಸೇವೆ ಹಾಗೂ ಸಮಾಜಮುಖಿ ಚಿಂತನೆಗಳ ಗುಣಗಾನ ಮಾಡಿದರು.

ವಕೀಲ ವಿವೇಕ್ ಮಾತನಾಡಿ, ಉದ್ಯೋಗದಲ್ಲಿ ಸಣ್ಣದು ಮತ್ತು ದೊಡ್ಡದು ಎಂಬುದು ಇರುವುದಿಲ್ಲ. ನಾವು ಆಯ್ಕೆ ಮಾಡಿಕೊಂಡ ಕ್ಷೇತ್ರದಲ್ಲಿ ಪರಿಶುದ್ಧತೆ ಅಳವಡಿಸಿಕೊಂಡರೆ ತಾನಾಗಿಯೇ ತೃಪ್ತಿ ಸಿಗುತ್ತದೆ. ನಮ್ಮ ಸೇವಾ ಕಾರ್ಯವನ್ನು ಜನರು ಮಾತ್ರ ಮೆಚ್ಚುವುದಿಲ್ಲ ದೇವರು ಮೆಚ್ಚುತ್ತಾನೆ. ಅಂತಹ ಸಾರ್ಥಕ ಸೇವೆಯನ್ನು ಮಂಜುನಾಥ್ ಮಾಡಿದ್ದಾರೆ ಎಂದರು.

ನಿವೃತ್ತ ನೌಕರ ಮಂಜುನಾಥ್ ಮಾತನಾಡಿ, ಯಾವ ಕೆಲಸವಾದರೂ ಸರಿ ಒಬ್ಬರಿಂದಲೇ ಮಾಡಲು ಸಾಧ್ಯವಿಲ್ಲ. ಅದೇ ರೀತಿ ರೈಲ್ವೆ ಇಲಾಖೆಯ ನೌಕರರಾಗಿ ನನ್ನ ಸೇವೆ ಆರಂಭಿಸಿದ ದಿನದಿಂದ ಇಂದಿನವರೆಗೆ ನನಗೆ ಸಹಕಾರ ನೀಡಿದ ನನ್ನ ಅಪ್ಪ-ಅಮ್ಮ, ಮಡದಿ-ಮಕ್ಕಳು, ಮಾರ್ಗದರ್ಶನ ನೀಡಿದ ಹಿರಿಯ ಅಧಿಕಾರಿಗಳು ಸದಾ ನನ್ನ ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಾ ಬಂದ ಸ್ನೇಹಿತರಿಗೆ ಧನ್ಯವಾದ ಸಲ್ಲಿಸುತ್ತೇನೆಂದರು.

ನಗರ ಯೋಜನಾ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅರುಣ್ ಕುಮಾರ್, ನಗರಸಭೆ ಮಾಜಿ ಅಧ್ಯಕ್ಷ ಜಿ.ಟಿ. ಗಣೇಶ್, ಮುಖಂಡರಾದ ಕುಮಾರಣ್ಣ, ರೈಲ್ವೆ ರಂಗಣ್ಣ, ಮಲ್ಲಿಕಾರ್ಜುನ್, ನಿಕಟಪೂರ್ವ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಜಿ.ಎನ್. ಮನೋಜ್ ಕುಮಾರ್ ಇತರರಿದ್ದರು.

# ಮೂಲಸೌಕರ್ಯಕ್ಕಾಗಿ ನವಗ್ರಾಮ ಕಾಲನಿ ಜನರ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಚನ್ನರಾಯಪಟ್ಟಣ: ತಾಲ್ಲೂಕಿನ ಅಕ್ಕನಹಳ್ಳಿ ಕೂಡಿನ ದಿಡಗ ರಸ್ತೆಯಲ್ಲಿವ ನವಗ್ರಾಮ ಕಾಲನಿಯಲ್ಲಿ ಕಾಂಕ್ರೀಟ್ ರಸ್ತೆ, ಒಳಚರಂಡಿ ಮತ್ತು ಮೂಲಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿ ನಿವಾಸಿಗಳು ಸೋಮವಾರ ಪ್ರತಿಭಟನೆ ನಡೆಸಿದರು.

ಹಲವು ವರ್ಷಗಳಿಂದ ಅಕ್ಕನಹಳ್ಳಿ ಕೂಡಿನ ನವಗ್ರಾಮ ಕಾಲನಿಯಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಂಡು ಸುಮಾರು 40ಕ್ಕೂ ಹೆಚ್ಚು ಕುಟುಂಬಗಳು ವಾಸ ಮಾಡುತ್ತಿವೆ. ಆದರೆ ಇದುವರೆಗೂ ರಸ್ತೆ, ಒಳಚರಂಡಿ ಸೇರಿ ಮೂಲಸೌಲಭ್ಯ ಕಲ್ಪಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಳೆಗಾಲದಲ್ಲಿ ಓಡಾಡುವುದೇ ಕಷ್ಟ: ನವಗ್ರಾಮ ಕಾಲನಿಯಲ್ಲಿ ಮಳೆ ಬಂದರೆ ಸಂಪೂರ್ಣ ಕೆಸರುಮಯವಾಗಲಿದ್ದು ವೃದ್ಧರು ಹಾಗೂ ಶಾಲೆಗಳಿಗೆ ಹೋಗುವ ಮಕ್ಕಳು ಓಡಾಡುವದೇ ಕಷ್ಟಕರವಾಗಲಿದೆ ಎಂದು ಆರೋಪಿಸಿದರು.

ಅನೇಕ ದಿನಗಳಿಂದ ಈ ಬಗ್ಗೆ ಸ್ಥಳೀಯ ಗ್ರಾಮ ಪಂಚಾಯಿತಿ ಹಾಗೂ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಮನವಿ ನೀಡಿದ್ದರು ಸಹ ಪ್ರಯೋಜನವಾಗಿಲ್ಲ ಎಂದು ಸ್ಥಳೀಯ ಕುಮಾರಸ್ವಾಮಿ ಹಿರೇಮಠ್ ತಿಳಿಸಿದರು.

ಅಕ್ಕನಹಳ್ಳಿ ಕೂಡು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ನವಗ್ರಾಮ ಕಾಲನಿಯಲ್ಲಿ ಹೆಚ್ಚು ಬಡ ಕುಟುಂಬಗಳೇ ವಾಸ ಮಾಡುತ್ತಿದ್ದು ಪ್ರತಿದಿನ ವ್ಯಾಪಾರ ಸೇರಿದಂತೆ ಕೂಲಿ ಕೆಲಸಗಳಿಗೆ ಬೇರೆ ಬೇರೆ ಪ್ರದೇಶಗಳಿಗೆ ಹೋಗುತ್ತಾರೆ. ಆದರೆ ರಸ್ತೆ ಹಾಗೂ ಒಳಚರಂಡಿ ಇಲ್ಲದೆ ಕುಟುಂಬ ವಾಸಿಗಳಿಗೆ ಸಮಸ್ಯೆಯಾಗಿದ್ದು ಜೊತೆಗೆ ಕಾಲನಿಯ ಮುಂಭಾಗದಲ್ಲಿ ಹಾಗೂ ಆಯ್ದ ಭಾಗಗಳಲ್ಲಿ ಹೆಚ್ಚಿನ ಗಿಡಗಂಟಿಗಳು ಬೆಳೆದು ನಿಂತಿವೆ. ಇದರಿಂದ ಸಾಂಕ್ರಾಮಿಕ ರೋಗ ಹರಡುವ ಜೊತೆಗೆ ವಿಷಜಂತುಗಳ ಪ್ರಾಣಭಯದಲ್ಲಿ ಕಾಲನಿಯ ಜನರು ವಾಸ ಮಾಡುವಂತಾಗಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಕ್ಷೇತ್ರದ ಶಾಸಕರು ಗಮನಹರಿಸುವಂತೆ ನವೀನ್ ಒತ್ತಾಯಿಸಿದರು.

ನಿವಾಸಿಗಳಾದ ಗಾರೆ ರಾಮು, ಗಣೇಶ್, ಕುಮಾರ್, ಕಂಬಯ್ಯ ಇತರರಿದ್ದರು.

# ಬೇಲೂರಿನಲ್ಲಿ ಯುವಕನ ಬರ್ಬರ ಹತ್ಯೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಹಾಡಹಗಲೇ ಪಟ್ಟಣದ ಬಸ್ ನಿಲ್ದಾಣದಲ್ಲಿ ಸೋಮವಾರ ಮಚ್ಚಿನಿಂದ ಕೊಚ್ಚಿ ಯುವಕನನ್ನು ಬರ್ಬರವಾಗಿ ಕೊಚ್ಚಿ ಕೊಲೆ ಮಾಡಲಾಗಿದೆ.

ಪಟ್ಟಣದ ಗಿರಿ ಮೃತ ಯುವಕ. ವೈಯಕ್ತಿಕ ಕಾರಣಕ್ಕೆ ಸ್ಥಳೀಯ ನಿವಾಸಿಗಳಾದ ಗಿರಿ ಮತ್ತು ಮತ್ತು ಕೋಳಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಸೀನ ಎಂಬಾತನ ನಡುವೆ ವೈಷಮ್ಯ ಮೂಡಿತ್ತು. ಈ ಹಿನ್ನೆಲೆಯಲ್ಲಿ ಗಿರಿಯನ್ನು ಮುಗಿಸಲು ಸೀನ ಹೊಂಚು ಹಾಕಿ ಕಾಯುತ್ತಿದ್ದ. ಸೋಮವಾರ ಮಧ್ಯಾಹ್ನ ಗಿರಿ ಪಟ್ಟಣದ ಬಸ್ ನಿಲ್ದಾಣದಲ್ಲಿ ಶೌಚಾಲಯಕ್ಕೆ ತೆರಳಿದ್ದ. ಇದನ್ನೇ ಕಾದಿದ್ದ ಸೀನ ಏಕಾಏಕಿ ಅಟ್ಯಾಕ್ ಮಾಡಿ ಕೋಳಿ ಮಾಂಸ ಕತ್ತರಿಸುವ ಕತ್ತಿಯಲ್ಲೇ ಗಿರಿಯನ್ನು ಮನ ಬಂದಂತೆ ಕೊಚ್ಚಿದ್ದಾನೆ. ಮಚ್ಚಿನ ಏಟಿನಿಂದ ಗಂಭೀರವಾಗಿ ಗಾಯಗೊಂಡ ಗಿರಿಗೆ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಹಾಸನ ಜಿಲ್ಲಾಸ್ಪತ್ರೆಗೆ ಕಳುಹಿಸಲಾಯಿತು. ಆದರೆ ಗಂಭೀರವಾಗಿ ಗಾಯಗೊಂಡಿದ್ದ ಗಿರಿ, ಮಾರ್ಗಮಧ್ಯೆಯೇ ಕೊನೆಯುಸಿರೆಳೆದಿದ್ದಾನೆ ಎಂದು ವೈದ್ಯರು ತಿಳಿಸಿದ್ದಾರೆ.

ಸುದ್ದಿ ತಿಳಿದ ಕೂಡಲೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮದ್ ಸುಜೀತಾ, ಸ್ಥಳೀಯ ಪೊಲೀಸರು ಹಾಗೂ ಡಿವೈಎಸ್ಪಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸದಾ ಶಾಂತಿಯಿಂದಿರುವ ಪಟ್ಟಣದ ಕೆಲ ಪುಂಡರ ಆಟಾಟೋಪದಿಂದ ರೌಡಿಸಂಗೆ ತಿರುಗುತ್ತಿದೆ. ಪೊಲೀಸ್ ಇಲಾಖೆ ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಯಾವ ಹಂತಕ್ಕೆ ತಲುಪಲಿದೆ ಎಂದು ಪಟ್ಟಣದ ನಿವಾಸಿಗಳು ಆತಂಕಗೊಂಡಿದ್ದಾರೆ. ಆರೋಪಿ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

# ರೈತ ಉತ್ಪಾದಕ ಕಂಪನಿ ಅಧ್ಯಕ್ಷರಾಗಿ ಧರ್ಮಪ್ಪ



ಸಕಲೇಶಪುರ: ರುದ್ರಗಿರಿ ರೈತ ಉತ್ಪಾದಕ ಕಂಪನಿಯ ಅಧ್ಯಕ್ಷರಾಗಿ ಎಂ.ಎನ್. ಧರ್ಮಪ್ಪ ಹಾಗೂ ಉಪಾಧ್ಯಕ್ಷರಾಗಿ ಕರಗುರು ಗೋವಿಂದೇಗೌಡ ಅವಿರೋಧ ಆಯ್ಕೆಯಾದರು.

ಕೇಂದ್ರ ಸರ್ಕಾರದ ಅನುದಾನದ ಅಡಿಯಲ್ಲಿ ನಿರ್ವಹಿಸಲ್ಪಡುವ ಕಂಪನಿ ತಾಲ್ಲೂಕಿನ ಚಂಗಡಿಹಳ್ಳಿ ಗ್ರಾಮದಲ್ಲಿ ಕಚೇರಿ ಹೊಂದಿದೆ. ನಿಕಟಪೂರ್ವ ಅಧ್ಯಕ್ಷ ಚಿಕ್ಕಂದೂರು ಚನ್ನಕೇಶ್ವರ್ ಅವರು ಅಧಿಕಾರ ಹಸ್ತಾಂತರ ಮಾಡಿದರು. ಈ ವೇಳೆ ನಿರ್ದೇಶಕರು ಹಾಜರಿದ್ದರು.

# ಭ್ರಷ್ಟಾಚಾರ ಬುಡ ಸಮೇತ ಕಿತ್ತು ಹಾಕುವೆ

## ಪುರಸಭೆ ಸಾಮಾನ್ಯ ಸಭೆಯಲ್ಲಿ ಶಾಸಕ ಸುರೇಶ್ | ಗೊಂದಲ ಮಾಡದೆ ಅಭಿವೃದ್ಧಿಗೆ ಸಹಕರಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಬೇಲೂರು: ತಾಲ್ಲೂಕಿನಲ್ಲಿ ಭ್ರಷ್ಟಾಚಾರವನ್ನು ಬುಡ ಸಮೇತ ಕಿತ್ತು ಹಾಕುವ ಸಂಕಲ್ಪ ಮಾಡಿದ್ದೇನೆ. ಕರ್ತವ್ಯ ಲೋಪ ಎಸಗುವ ಅಧಿಕಾರಿಗಳನ್ನು ನೇರವಾಗಿ ಖಂಡಿಸುತ್ತೇನೆ. ನನಗೆ ಸಾರ್ವಜನಿಕರ ಹಿತ ಮುಖ್ಯ. ಭ್ರಷ್ಟಾಚಾರದಲ್ಲಿ ಯಾರೇ ಭಾಗಿಯಾಗಿದ್ದರು ಅವರನ್ನು ನಾನು ಮಟ್ಟ ಹಾಕದೆ ಬಿಡುವುದಿಲ್ಲ ಎಂದು ಶಾಸಕ ಹೆಚ್.ಕೆ. ಸುರೇಶ್ ಗುಡುಗಿದರು.

ಪುರಸಭೆಯ ವೇಲಾಪುರಿ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸಾಮಾನ್ಯ ಸಭೆಯಲ್ಲಿ ಮಾತನಾಡಿ, ಎಲ್ಲ ಸದಸ್ಯರ ಒಗ್ಗಟ್ಟು ಹಾಗು ಅಭಿವೃದ್ಧಿಗೆ ಬೆಂಬಲ ನೀಡಿದರೆ ಮಾತ್ರ ಪಟ್ಟಣ ಅಭಿವೃದ್ಧಿ ಹೊಂದಲು ಸಾಧ್ಯ. ವೈಯಕ್ತಿಕ ಹಿತಾಸಕ್ತಿಗೆ ಒಬ್ಬರ ಮೇಲೊಬ್ಬರು ಆರೋಪ ಮಾಡುವ ಬದಲು ಮತ ನೀಡಿರುವ ಜನರಿಗೆ ಅನುಕೂಲವಾಗುವತ್ತ ಚಿತ್ತ ಹರಿಸಬೇಕು ಎಂದರು. ಪುರಸಭೆಯಲ್ಲಿ ಭ್ರಷ್ಟಾಚಾರ ಆಗಿದ್ದರೆ ಲೋಕಾಯುಕ್ತಕ್ಕೆ ದೂರು ಸಲ್ಲಿಸಲು ನಾನು ಬದ್ಧನೆಂದರು.

ಸದಸ್ಯ ಶಾಂತಕುಮಾರ್ ಮಾತನಾಡಿ, ಇತ್ತೀಚೆಗೆ ಪುರಸಭೆಯಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಖಾತೆ ಬದಲಾವಣೆ ಹೆಸರಿನಲ್ಲಿ ಅಧಿಕಾರಿಗಳು ಲೂಟಿ ಹೊಡೆಯುತ್ತಿದ್ದಾರೆ. ಪುರಸಭೆ ವ್ಯಾಪ್ತಿಯ ಸರ್ಕಾರಿ ಜಾಗವನ್ನು ಖಾತೆ ಮಾಡಿಕೊಳ್ಳುವುದರ ಜೊತೆಗೆ ಅಕ್ರಮ ಖಾತೆ ಹಾಗು ಬೇಕಾಬಿಟ್ಟಿ ಕಂದಾಯ ವಸೂಲಿ ಮಾಡುತ್ತಿರುವುದರಿಂದ ಪುರಸಭೆ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತಿದೆ. ಅಲ್ಲದೆ ಯಾವ ಜಿಲ್ಲೆಯಲ್ಲೂ ಇರದ ಕಂದಾಯದ ಬರೆ ಇಲ್ಲಿ ಬಡವರ್ಗದವರ ಮೇಲೆ ಹೇರುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೀನು ಮಾರುಕಟ್ಟೆ ಬಳಿ ಕಂದಾಯ ಇಲಾಖೆ ಅಧಿಕಾರಿಗಳೇ ಅಕ್ರಮ ಕಟ್ಟಡ ಎಂದು ಸೂಚನೆ ನೀಡಿದರೂ ನಮ್ಮ ಅಧಿಕಾರಿಗಳು ಏಕೆ ಕ್ರಮ ಕೈಗೊಳ್ಳುತ್ತಿಲ್ಲ ಎಂದರು. ಅದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಸದಸ್ಯ ಜಗದೀಶ್, ಮೊದಲು ನಿಮ್ಮ ತಟ್ಟೆಯಲ್ಲಿ ಏನು ಬಿದ್ದಿದೆ ನೋಡಿಕೊಳ್ಳಿ. ಅದನ್ನು ಬಿಟ್ಟು ಬೇರೆಯವರ ಆಸ್ತಿ ವಿಚಾರಕ್ಕೆ ತಲೆ ಹಾಕುವುದು ಬೇಡವೆಂದು ತಿರುಗೇಟು ನೀಡಿದರು. ಸದಸ್ಯ ಜಮಾಲ್ ಮಾತನಾಡಿ, ಕ್ರಿಯಾ ಯೋಜನೆ ತಯಾರಿಸುವಾಗ 23 ಸದಸ್ಯರ ಗಮನಕ್ಕೆ ತರದೆ ಅಧಿಕಾರಿಗಳೇ ಕ್ರಿಯಾ ಯೋಜನೆ ತಯಾರಿಸುತ್ತಿದ್ದಾರೆ. ಚುನಾಯಿತ ಪ್ರತಿನಿಧಿಗಳಿಗೆ ಮಾಹಿತಿ ನೀಡದೆ ಅಂಗವಿಕಲರಿಗೆ ನೀಡುವ ಸವಲತ್ತುಗಳನ್ನು ನಮಗೆ ಮಾಹಿತಿ ನೀಡದೆ ಅಧಿಕಾರಿಗಳು ಮಾಡುವುದಾದರೆ ನಾವು ಇಲ್ಲಿ ಏಕೆ ಇರಬೇಕು. ಪುರಸಭೆಗೆ ನಮ್ಮನ್ನು ಇಲ್ಲಿ ಕಾಗೆಗಳು ಕಚ್ಚಿ ಬಂದು ಹಾಕಿಲ್ಲ. ವೈಯಕ್ತಿಕ ವಿಚಾರಗಳನ್ನು ಹೊರಗಡೆ ಬಿಡಿ ಅಭಿವೃದ್ಧಿಗೆ ಎಲ್ಲರೂ ಸಹಕಾರ ನಿಡೋಣ. ಪುರಸಭೆ ವ್ಯಾಪ್ತಿಯ ರಸ್ತೆ ಗುಂಡಿ ಮುಚ್ಚಲು ಕ್ರಮ ವಹಿಸಿ ಎಂದು ಹೇಳಿದರು.

ಸದಸ್ಯ ಗಿರೀಶ್ ಮಾತನಾಡಿ, ಪುರಸಭೆಯಲ್ಲಿ ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ. ಯಾರೇ ಕಳ್ಳಕಾಕರು ಬಂದರೂ ಇಲ್ಲಿರುವ ವಸ್ತುಗಳನ್ನು ತುಂಬಿಕೊಂಡು ಹೋದರು. ಯಾರಿಗೂ ತಿಳಿಯುವುದಿಲ್ಲ ಇನ್ನು ಗಣಪತಿ ದೇವಾಲಯಕ್ಕೆ ಮೀಸಲಿಟ್ಟ ಜಾಗವನ್ನು ಖಾಸಗಿ ವ್ಯಕ್ತಿಗಳಿಗೆ ಖಾತೆ ಮಾಡಿಕೊಟ್ಟಿದ್ದಾರೆ. ಸಣ್ಣ ಪುಟ್ಟ ವ್ಯಕ್ತಿಗಳು ಸ್ವಲ್ಪ ಒತ್ತುವರಿ ಮಾಡಿದ್ದರು ಅವರ ವಿರುದ್ಧ ಕ್ರಮ ಕೈಗೊಳ್ಳುವುದಿಲ್ಲ. ಬಲಾಢ್ಯರು ಯಾವುದೇ ದಾಖಲೆಗಳನ್ನು ನೀಡದೆ ಬೇಕಾಬಿಟ್ಟಿಯಾಗಿ ಕಾಮಗಾರಿ ಮಾಡಿದರೂ ಕೇಳುವುದಿಲ್ಲ ಎಂದು ಹೇಳಿದರು.

ಮುಖ್ಯಾಧಿಕಾರಿ ಬಸವರಾಜು ಕಾಟಪ್ಪ ಶಿಗ್ಗಾವಿ ಇದ್ದರು.

### ಸಾಮಾನ್ಯ ಸಭೆಯಲ್ಲಿ ಗೊಂದಲ ಗಲಾಟೆ

ಪುರಸಭೆ ಸಾಮಾನ್ಯ ಸಭೆ ಕಾಂಗ್ರೆಸ್ ಸದಸ್ಯರ ಪರಸ್ಪರ ಆರೋಪ-ಪ್ರತ್ಯಾರೋಪಗಳಿಂದ ಗೊಂದಲದ ಗೂಡಾಗಿ ಮಾರ್ಪಟ್ಟಿತು. ಸದಸ್ಯರ ಗಲಾಟೆಗೆ ಶಾಸಕ ಹೆಚ್.ಕೆ.ಸುರೇಶ್ ಮೂಕ ಪ್ರೇಕ್ಷಕರಾದರು. ಪುರಸಭೆ ಮಾಜಿ ಅಧ್ಯಕ್ಷ ಎ.ಆರ್.ಅಶೋಕ್ ವಿರುದ್ಧ ಮುಗಿಬಿದ್ದ ಸ್ವಪಕ್ಷದ ಶಾಸಕರು ಗಾಜಿನ ಗ್ಲಾಸ್ ಒಡೆದು ಹಾಕಿದರು. ಸಭೆ ಆರಂಭವಾಗುತ್ತಿದ್ದಂತೆ ಎ.ಆರ್.ಅಶೋಕ್ ಅವರು ಪುರಸಭೆ ಮಾಜಿ ಅಧ್ಯಕ್ಷ ಸಿ.ಎನ್.ದಾನಿ ಅವರು ಹಾಸನ ರಸ್ತೆಯಲ್ಲಿ ನಿರ್ಮಿಸುತ್ತಿರುವ ಕಟ್ಟಡ ಕಾಮಗಾರಿ ಪೂರ್ಣಗೊಳ್ಳದೆ ಇ-ಸ್ವತ್ತು ಕೊಟ್ಟಿದ್ದು ಏಕೆಂದು ಪ್ರಶ್ನಿಸಿದರು. ಅದಕ್ಕೆ ವಿರೋಧ ವ್ಯಕ್ತಪಡಿಸಿದ ಸದಸ್ಯರಾದ ಸಿ.ಎನ್.ದಾನಿ, ಶಾಂತಕುಮಾರ್ ಮತ್ತಿತರರು ಗಲಾಟೆ ಶುರು ಮಾಡಿದರು.

# ಹೂಳು ತುಂಬಿದ ನಾಲೆ: ಮಾರ್ಗ ಬದಲಿಸಿದ ನೀರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಸೀಕೆರೆ: ತಾಲ್ಲೂಕಿನ ಜಾವಗಲ್ ದೊಡ್ಡಕೆರೆಯ ಅಧಿಕ ನೀರು ಹರಿಸುವ ನಾಗಲಾಪುರ ಕಟ್ಟೆಯಿಂದ ಜಾವಗಲ್ ದೊಡ್ಡಕೆರೆ ವರೆಗಿನ ನಾಲೆಯು ದುರಸ್ತಿಗೀಡಾಗಿ ಜಾವಗಲ್ ಕೆರೆ ತಲುಪಬೇಕಿದ್ದ ನೀರು ಬರಹಳ್ಳದ ಮೂಲಕ ಬೇರೆ ಕಡೆಗೆ ಹರಿಯುತ್ತಿದೆ.

ಸಾರ್ವಜನಿಕರ ದೂರು ಆಧರಿಸಿ ಮಾಜಿ ಸಚಿವ ಬಿ. ಶಿವರಾಂ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಕಳೆದ 8-10 ದಿನಗಳಿಂದ ಭಾರೀ ಮಳೆ ಬಿದ್ದ ಪರಿಣಾಮ ಹಾಗೂ ದೊಡ್ಡ ಕೋಡಿಹಳ್ಳಿ ಕೆರೆ ಕೋಡಿ ಬಿದ್ದಿರುವುದರಿಂದ ನೀರು ನಾಗಲಾಪುರ ಕಟ್ಟೆಯ ಮೂಲಕ ಜಾವಗಲ್ ಕೆರೆಗೆ ಹರಿದು ಬರುತ್ತಿದೆ. ನಾಗಲಾಪುರ ಕಟ್ಟೆಯಿಂದ ಜಾವಗಲ್ ದೊಡ್ಡಕೆರೆ ವರೆಗಿನ 3 ಕಿ.ಮೀ. ಫೀಡರ್ ಚಾನೆಲ್ (ನಾಲೆ) ಗಿಡಗಂಟೆಗಳಿಂದ ತುಂಬಿದ್ದು ನೀರು ಸರಾಗವಾಗಿ ಹರಿಯದೇ ಬರಹಳ್ಳಕ್ಕೆ, ಖಲಂದರ್ ನಗರ, ಗಾಂಧಿನಗರ, ಹೌಸಿಂಗ್ ಬೋರ್ಡ್ ಕಾಲನಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಾನಿ ಉಂಟಾಗಿದೆ. ತಗ್ಗು ಪ್ರದೇಶದಲ್ಲಿನ ಮನೆಗಳಿಗೆ ನೀರು ನುಗುತ್ತಿದ್ದು ತೊಂದರೆಯಾಗಿದೆ. ಹೌಸಿಂಗ್ ಬೋರ್ಡ್ ಕಾಲನಿ ಹಿಂಭಾಗದಿಂದ ಪ್ರಾರಂಭಗೊಳ್ಳುವ ಜಾವಗಲ್ ದೊಡ್ಡಕೆರೆಗೆ ಬರುವ ನಾಲೆಗೆ ಅಡ್ಡಲಾಗಿ ತಗಡು ಇಟ್ಟಿದ್ದು, ಶೌಚಾಲಯಕ್ಕೆ ಗುಂಡಿಗಳನ್ನು ಕಟ್ಟಿಸಿಕೊಳ್ಳದೆ ಚಾನೆಲ್‌ಗೆ ನೇರವಾಗಿ ಸಂಪರ್ಕ ನೀಡಿರುವುದು, ಅಕ್ಕಪಕ್ಕ ಒತ್ತುವರಿ ಮಾಡಿ ಮನೆಗಳನ್ನು ನಿರ್ಮಿಸಿಕೊಂಡಿರುವುದೇ ಮಳೆಗಾಲದಲ್ಲಿ ನೀರು ಸರಾಗವಾಗಿ ಹರಿಯಲು ಸಾಧ್ಯವಾಗದೆ ಸಮಸ್ಯೆಯುಂಟಾಗುತ್ತಿದೆ ಎಂಬುದನ್ನು ಮಾಜಿ ಸಚಿವರ ಗಮನಕ್ಕೆ ತರಲಾಗಿ ಸ್ಥಳಗಳಿಗೆ ಬಿ. ಶಿವರಾಮ್ ಭೇಟಿ ನೀಡಿ ಪರಿಶೀಲಿಸಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಸಣ್ಣ ನೀರಾವರಿ ಇಲಾಖೆಯ ಎ.ಇ.ಇ.ರವರಿಗೆ ದೂರವಾಣಿ ಕರೆ ಮಾಡಿ ತ್ವರಿತವಾಗಿ ಗಿಡಗಂಟಿ, ಹೂಳು ತೆಗೆಸಿ ಜಾವಗಲ್ ಕೆರೆ ತುಂಬಿಸುವ ಪ್ರಯತ್ನ ಮಾಡಬೇಕೆಂದು ತಿಳಿಸಿದರು.

ತಕ್ಷಣ ಕಾರ್ಯಪ್ರವೃತ್ತರಾದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವಿ, ಸಣ್ಣ ನೀರಾವರಿ ಇಲಾಖೆ ಎಇಇ ಸುಂದರರಾಜು ಮತ್ತು ಸಿಬ್ಬಂದಿ ಜೆಸಿಬಿ ಹಾಗೂ ಹಿಟಾಚಿ ಮೂಲಕ ಗಿಡಗಂಟಿಗಳ ನಿರ್ಮೂಲನೆ, ಹೂಳು ತೆಗೆದು ನಾಲೆಯ ಮೂಲಕ ನೀರು ಸರಾಗವಾಗಿ ಹರಿದು ಜಾವಗಲ್ ದೊಡ್ಡಕೆರೆ ತುಂಬಿಸುವಲ್ಲಿ ಸಫಲರಾದರು. ಬರಹಳ್ಳಕ್ಕೆ ಹೆಚ್ಚಾಗಿ ಹರಿದು ಹೋಗುತ್ತಿದ್ದ ನೀರಿನ ಪ್ರಮಾಣವನ್ನು ಅಧಿಕಾರಿಗಳು, ಗ್ರಾಮಸ್ಥರು, ಗ್ರಾಮ ಪಂಚಾಯಿತಿ ಸದಸ್ಯರು, ಮಾಜಿ ಸದಸ್ಯರುಗಳ ಸಹಕಾರದೊಂದಿಗೆ ಮರಳು ಮೂಟೆ ಕಟ್ಟಿ ನೀರಿನ ಪ್ರಮಾಣ ಕಡಿಮೆ ಮಾಡಿದರು ನಾಗಲಾಪುರ ಕಟ್ಟೆಯಿಂದ ಜಾವಗಲ್ ಕೆರೆ ವರೆಗಿನ 3 ಕಿ.ಮೀ. ಫೀಡರ್ ಚಾನೆಲ್ ಮೇಲ್ಭಾಗದಲ್ಲಿರುವ ಜಮೀನಿನವರು, ಬಸ್ ನಿಲ್ದಾಣ ಪಕ್ಕದಲ್ಲಿರುವ ವರ್ತಕರು, ಹೌಸಿಂಗ್ ಬೋರ್ಡ್ ಖಲಂದರ್ ನಗರ ನಿವಾಸಿಗಳು ತ್ಯಾಜ್ಯಗಳನ್ನು ನಾಲೆಗೆ ಹಾಕಿ, ನಾಲೆ ಮುಚ್ಚಲು ಕಾರಣವಾಗಿದ್ದಾರೆ. ಹೌಸಿಂಗ್ ಬೋರ್ಡ್ ಬಡಾವಣೆಯಲ್ಲಿ ನಾಲೆಗೆ ಅಡ್ಡಲಾಗಿ ಕೆಲವರು ಪರವಾನಗೆ ಪಡೆಯದೇ ಹರಿಯುವ ನೀರಿಗೆ ಅಡ್ಡಲಾಗಿ ತಗಡು, ಇನ್ನಿತರ ತ್ಯಾಜ್ಯಗಳನ್ನು ತುಂಬಿರುತ್ತಾರೆ. ಈ ಬಗ್ಗೆ ಗ್ರಾಮ ಪಂಚಾಯತ್ ಸಣ್ಣ ನೀರಾವರಿ ಇಲಾಖೆಯವರು ಕೂಡಲೇ ಕ್ರಮ ಕೈಗೊಂಡು ಅಡ್ಡಗಟ್ಟುವಿಕೆ, ತ್ಯಾಜ್ಯಗಳನ್ನು ತುಂಬದಂತೆ ಕ್ರಮ ತೆಗೆದುಕೊಳ್ಳುವಂತೆ ಗ್ರಾಮಸ್ಥರು ಒತ್ತಾಯಪಡಿಸಿದ್ದಾರೆ.

ಸಣ್ಣ ನೀರಾವರಿ ಇಲಾಖೆಯ ಎಇಇ ಸುಂದರರಾಜು ಮಾತನಾಡಿ, ಮಳೆಯಿಂದ ಹಾನಿಗೊಂಡ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸುತ್ತಿದ್ದು, ಪ್ರಸ್ತುತ ಸುರಿಯುತ್ತಿರುವ ಭಾರೀ ಮಳೆಯಿಂದ ಜಾವಗಲ್ ದೊಡ್ಡಕೆರೆಗೆ ನೀರು ಹರಿದು ಬರುವ ಪೋಷಕ ಕಾಲುವೆಯು ಹಾನಿಯಾಗಿ ಅಪಾರ ಪ್ರಮಾಣದ ನೀರು ಸೋರಿಕೆಯಾಗಿ ಜಾವಗಲ್ ಗ್ರಾಮದ ಹಲವು ಮನೆಗಳಿಗೆ ನೀರು ಹರಿದು ಜನ ವಾಸ್ತವ್ಯಕ್ಕೆ ತೊಂದರೆಯಾಗಿರುತ್ತದೆ. ಗ್ರಾಮ ಪಂಚಾಯಿತಿಯ ಸಹಯೋಗದೊಂದಿಗೆ ತಾತ್ಕಾಲಿಕವಾಗಿ ನಾಲೆಯನ್ನು ಸ್ವಚ್ಛಗೊಳಿಸಿ ನೀರು ಸರಾಗವಾಗಿ ಹರಿಯಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಪರಿಸ್ಥಿತಿಯು ಸಮಸ್ಯೆಗಳ ಕುರಿತು ಮನೆ ಸರ್ಕಾರದ ಕಾರ್ಯದರ್ಶಿಯವರೊಂದಿಗೆ ಮೌಖಿಕವಾಗಿ ಚರ್ಚಿಸಲಾಗಿದ್ದು, ನಾಲೆಯ ದುರಸ್ತಿ ಹಾಗೂ ಸದರಿ ಸಮಸ್ಯೆಗಳ ಬಗ್ಗೆ ಕ್ರಮ ಕೈಗೊಳ್ಳಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಮಾಜಿ ಸಚಿವರು ಸೂಚಿಸಿದ್ದಾರೆ ಎಂದರು.

# ಗ್ರಾಮೀಣ ಭಾಗದ ರಸ್ತೆ ಅಭಿವೃದ್ಧಿಗೆ ಆದ್ಯತೆ



ಬೇಲೂರು: ಗ್ರಾಮೀಣ ಪ್ರದೇಶಗಳ ರಸ್ತೆಗಳಿಗೆ ಕಾಯಕಲ್ಪ ನೀಡಲು ಆದ್ಯತೆ ನೀಡಲಾಗುವುದೆಂದು ಶಾಸಕ ಹೆಚ್.ಕೆ.ಸುರೇಶ್ ಹೇಳಿದರು.

ಯಗಚಿ ಯೋಜನೆ ಉಪ ವಿಭಾಗದಿಂದ ತಾಲ್ಲೂಕಿನ ಬಂಟೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಯಪುರ ಕೊಪ್ಪಲು ಸೇರಿ ಸುತ್ತಲಿನ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ 50 ಲಕ್ಷ ರೂ. ವೆಚ್ಚದ ಕಾಂಕ್ರಿಟ್ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಪ್ರಥಮವಾಗಿ ಕ್ಷೇತ್ರದಲ್ಲಿರುವ ಗ್ರಾಮೀಣ ಪ್ರದೇಶದ ಜನರಿಗೆ ಉತ್ತಮ ಮೂಲಸೌಕರ್ಯ ಒದಗಿಸುವುದು ಹಾಗೂ ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿಪಡಿಸಿದರೆ ಸಾರ್ವಜನಿಕರು ಮತ್ತು ರೈತರ ಸಂಚಾರಕ್ಕೆ ಸುಲಭವಾಗುತ್ತದೆ. ಜೊತೆಗೆ ರೈತರು ತಾವು ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಲು ಸಹಕಾರಿಯಾಗುತ್ತದೆ ಎಂದರು. ಮುಂದಿನ ದಿನಗಳಲ್ಲಿ ತಾಲ್ಲೂಕಿನ ಪ್ರತಿ ಗ್ರಾಮಕ್ಕೂ ಗುಣಮಟ್ಟದ ರಸ್ತೆ, ಶುದ್ಧ ಕುಡಿಯುವ ನೀರು ಮತ್ತು ವಿದ್ಯುತ್ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ ಗ್ರಾಮಗಳ ಅಭಿವೃದ್ಧಿ ಕೆಲಸಗಳನ್ನು ಮಡುವ ಸಂದರ್ಭ ಸಾರ್ವಜನಿಕರ ಸಹಕಾರ ಅಗತ್ಯ. ಜನರೇ ಮುಂದೆ ನಿಂತು ತಮ್ಮ ಗ್ರಾಮಗಳ ಅಭಿವೃದ್ಧಿಯಲ್ಲಿ ಪಾಲುದಾರರಾಗಬೇಕು ಎಂದು ತಿಳಿಸಿದರು.

ಬಂಟೇನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಧನಂಜಯ, ಮುಖಂಡರಾದ ಅಣ್ಣೇಗೌಡ, ನಾಗರಾಜ್, ಸಂತೋಷ್ ಇತರರಿದ್ದರು.

# ಉತ್ತಮ ಬದುಕಿಗೆ ಧರ್ಮ ಪರಿಪಾಲನೆ ಅಗತ್ಯತೆ ಹೆಚ್ಚಿದೆ: ರಂಭಾಪುರಿ ಶ್ರೀ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಧರ್ಮ ಮತ್ತು ಸಂಸ್ಕೃತಿ ಪರಿಪಾಲನೆಯಿಂದ ಒಳ್ಳೆಯ ಸಮಾಜ ಕಟ್ಟಲು ಸಾಧ್ಯವಿದ್ದು ಅದರ ಅಗತ್ಯತೆ ಹೆಚ್ಚಿದೆ ಎಂದು ಶ್ರೀಮದ್ ರಂಭಾಪುರಿ ಪೀಠದ ಪ್ರಸನ್ನ ರೇಣುಕಾ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಕಟ್ಟಾಯ ಹೋಬಳಿ ಮುಟ್ಟನಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಬಸವೇಶ್ವರಸ್ವಾಮಿ ದೇವಸ್ಥಾನದ ಪ್ರತಿಷ್ಠಾಪನೆ ಹಾಗೂ ಬ್ರಹ್ಮ ಕಳಸೋತ್ಸವ ಅಂಗವಾಗಿ ನಡೆದ ಅಡ್ಡಪಲ್ಲಕ್ಕಿ ಉತ್ಸವ, ಧಾರ್ಮಿಕ ಜಾಗೃತಿ ಸಭೆಯಲ್ಲಿ ಆಶೀರ್ವಚನ ನೀಡಿ, ಮನುಷ್ಯನಲ್ಲಿ ಶಾಂತಿ ಇಲ್ಲದಿರುವುದನ್ನು ನೋಡಿದರೆ ಧರ್ಮ ಸಂಸ್ಕೃತಿ ಪರಿಪಾಲನೆಯಾಗುತ್ತಿದೆ ಎಂಬುದು ವೇದ್ಯವಾಗುತ್ತದೆ. ಜೀವನದ ಉನ್ನತಿಗೆ ಧರ್ಮ ಸಂಸ್ಕೃತಿಗಳು ನೇರವಾಗುತ್ತವೆ. ಆದರ್ಶ ಪ್ರಾಯವಾದ ಜೀವನ



ನಡೆಸುವುದು ಅಗತ್ಯವಿದೆ. ಸೌಹಾರ್ದತೆಯಿಂದ ಎಲ್ಲಾ ಸಮುದಾಯದ ಬೆಳವಣಿಗೆಗೆ ಆಡಳಿತ ನಡೆಸುವರು ಯೋಚಿಸಬೇಕು. ಜಾತಿ ಜಾತಿಗಳಲ್ಲಿಯೇ ಅಸಮಾಧಾನ ಉಂಟಾಗದಂತೆ ತಡೆಯಬೇಕು. ಎಲ್ಲಾ ವರ್ಗದವರ ಪ್ರಗತಿಗೆ ಶ್ರಮಿಸಬೇಕು ಎಂದರು.

ಸಂಸದ ಕೋಟ ಶ್ರೀ ನಿವಾಸ ಪೂಜಾರಿ ಅವರ ಸಹಾಕಾರದಿಂದ ಬಸವೇಶ್ವರ ದೇವಸ್ಥಾನ ರೂಪು ಪಡೆದಿದ್ದು ಧಾರ್ಮಿಕ ಕಾರ್ಯಚಟುವಟಿಕೆಗೆ ವರದಾನವಾಗಿದೆ ಎಂದರು.

ಮುಟ್ಟನಹಳ್ಳಿ ಅವಧೂತರಾದ ಪ್ರವೀಣ್ ಗೂರೂಜಿ ಮಾತನಾಡಿ, ಹಿಂದಿನ ಬಿಜೆಪಿ ಸರ್ಕಾರದ ಸಹಾಯಧನದಿಂದ ದೇವಸ್ಥಾನ ನಿರ್ಮಿಸಲು ಸಾಧ್ಯವಾಗಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿಮೆಂಟ್ ಮಂಜು ಮಾತನಾಡಿದರು.

ಕಾರ್ಜುವಳ್ಳಿ ಮಠದ ಶ್ರೀ ಸದಾಶಿವ ಸ್ವಾಮೀಜಿ, ಯಸಳೂರು ಮಠದ ಶ್ರೀ ಚನ್ನಸಿದ್ದೇಶ್ವರ ಸ್ವಾಮೀಜಿ, ಕೊಡ್ಲಿಪೇಟೆಯ ಶ್ರೀ ಸದಾಶಿವ ಸ್ವಾಮೀಜಿ, ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ, ಕೊಳ್ಳೆಗಾಲದ ಶ್ರೀ ಶಿವಮೂರ್ತಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ, ಬಿಜೆಪಿ ಮುಖಂಡರಾದ ಬೇಳೂರು ರಾಘವೇಂದ್ರ, ಡಾ. ಧನಂಜಯ್ ಸರ್ಜಿ, ಅನಿಲ್, ಜೆಡಿಎಸ್ ಮುಖಂಡ ದ್ಯಾವೇಗೌಡ, ಕಾಂಗ್ರೆಸ್ ಮುಖಂಡ ಮುರಳಿ ಮೋಹನ್, ತಾಲ್ಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಕಟ್ಟಾಯ ಶಿವಕುಮಾರ್ ಮತ್ತಿತರರಿದ್ದರು.

# ಶಿಕ್ಷಣವಿದ್ದರೂ ಅಲ್ಪನಾಗುತ್ತಿರುವ ಮನುಷ್ಯ : ಶಂಭುನಾಥ ಶ್ರೀ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಶ್ರವಣಬೆಳಗೊಳ: ಶಿಕ್ಷಣವಿದ್ದರೂ ವಿನಯ, ಜ್ಞಾನವಿಲ್ಲದೆ ಮನುಷ್ಯ ಅಲ್ಪ ಮಾನವನಾಗಿ ಬದಲಾಗುತ್ತಿದ್ದಾನೆ ಎಂದು ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಮಹಾಪೋಷಕರು, ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್‌ನಿಂದ ಭಾನುವಾರ ಪಟ್ಟಣದ ಗಣ್ಯರ ಅತಿಥಿ ನಿವಾಸದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾಧ್ಯಕ್ಷರ ಸಮಾವೇಶ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಾಹಿತ್ಯಕ್ಕೆ ಧರ್ಮ, ಜಾತಿ ಹಾಗೂ ಭಾಷೆ ಎಂಬ ಬೇಧವಿಲ್ಲ. ಕಿವಿಗೆ ಕೇಳಿಸುವ ಹಿತವಾದ ಪದಗಳೆಲ್ಲವೂ ಸಾಹಿತ್ಯವೇ ಆಗಿರುತ್ತದೆ ಎಂದರು.

ಹುಟ್ಟಿದಾಗ ವಿಶ್ವ ಮಾನವ ಎನಿಸಿಕೊಂಡವನು ಬೆಳೆ ಬೆಳೆಯುತ್ತ ಅಲ್ಪ ಮಾನವನಾಗುತ್ತಿದ್ದಾನೆ. ಶಿಕ್ಷಣವಿದ್ದರೂ ಜ್ಞಾನದ ಅರಿವಿಲ್ಲದೆ ದುರಾಸೆಯೊಂದಿಗೆ ಅಸೂಯೆ ಹೊಂದಿದ್ದು ಮಾನವೀಯ ಮೌಲ್ಯಗಳನ್ನು ಬದಿಗೊತ್ತಿರುವುದೇ ಅದಕ್ಕೆ ಪ್ರಮುಖ ಕಾರಣವಾಗಿದೆ. ನಾಡು-ನುಡಿ, ನೆಲ-ಜಲ ಹಾಗು ಭಾಷೆಯ ಜೊತೆಗೆ ಸಾಹಿತ್ಯ ಭಾವನೆ ಮೂಡಿಸುವ ಮೂಲಕ ಕತ್ತಲೆಯಿಂದ ಬೆಳಕಿನೆಡೆಗೆ ಕೈ ಹಿಡಿದು ನಡೆಸುವುದೇ ಪರಿಷತ್‌ನ ಉದ್ದೇಶ ಎಂದರು.

ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, ಮಕ್ಕಳಲ್ಲಿ ಸಾಹಿತ್ಯ ಅಭಿರುಚಿ ಬೆಳೆಸುವ ಮೂಲಕ ನಾಡು-ನುಡಿ ಹಾಗೂ ಭಾಷಾ ಸಾಹಿತ್ಯದ ನೆಲೆಗಟ್ಟನ್ನು ತಳಮಟ್ಟದಿಂದ ಸುಭದ್ರವಾಗಿ ಕಟ್ಟುವಲ್ಲಿ ಮಕ್ಕಳ ಸಾಹಿತ್ಯ ಪರಿಷತ್‌ನ ಕಾರ್ಯವೈಖರಿ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಶೈಕ್ಷಣಿಕ ವ್ಯವಸ್ಥೆಯಲ್ಲಿ ವ್ಯಾಕರಣ ಬದ್ಧ ಕನ್ನಡಕ್ಕೆ ಹೆಚ್ಚು ಆದ್ಯತೆ ನೀಡಬೇಕು. ವ್ಯವಹಾರಿಕ ಸಲುವಾಗಿ ಮಾತ್ರ ಆಂಗ್ಲ, ಹಿಂದಿ ಹಾಗು ಇತರೆ ಭಾಷೆಗಳ ಬಳಕೆ ಇರಲಿ. ಆದರೆ ಸದಾಕಾಲ ಮಾತೃ ಭಾಷೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.

ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್‌ನ ಯಾವ ಕಾರ್ಯಕ್ರಮಗಳಿಗೆ ಸರ್ಕಾರದಿಂದ ಇದೂವರೆಗೂ ಅನುದಾನ ಅಥವಾ ಆರ್ಥಿಕ ನೆರವು ಸಿಗುತ್ತಿಲ್ಲ. ಸರ್ಕಾರದ ಆಶ್ರಯದಲ್ಲಿ ನಡೆಯಬೇಕಿದೆ. ಸರ್ಕಾರದ ಗಮನ ಸೆಳೆದು ಸರ್ಕಾರದ ಮಟ್ಟದಿಂದಲೇ ಸಹಕಾರ ಕಲ್ಪಿಸುವಂತೆ ಮನವಿ ಮಾಡಲಾಗುವುದು ಎಂದು ತಿಳಿಸಿದರು.

ಮಕ್ಕಳ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಸಿ.ಎನ್.ಅಶೋಕ್ ಮಾತನಾಡಿ, ಮಕ್ಕಳಲ್ಲಿರುವ ಸಾಹಿತ್ಯ ಪ್ರತಿಭೆಯನ್ನು ಮುಖ್ಯ ಭೂಮಿಕೆಗೆ ತರುವ ಪ್ರಯತ್ನ ಯಶಸ್ವಿಯಾಗಿದ್ದು ನಿರಂತರವಾಗಿ ಮುಂದುವರಿಯಲಿದೆ. ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀಗಳು ಭದ್ರ ಬುನಾದಿ ಹಾಕಿಕೊಟ್ಟಿರುವ ಮಕ್ಕಳ ಸಾಹಿತ್ಯ ಪರಿಷತ್ ಹೆಮ್ಮರವಾಗಿ ಬೆಳೆದು ದೆಹಲಿ ವರೆಗೂ ತಲುಪಿದೆ. ಮುಂದಿನ ದಿನಗಳಲ್ಲಿ ಅಮೇರಿಕಾ ಹಾಗು ದುಬೈನಲ್ಲಿ ಆಚರಣೆ ಮಾಡಲಾಗುತ್ತಿದೆಯೆಂದರು. ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಆಗಮಿಸಿದ್ದ ಜಿಲ್ಲಾಧ್ಯಕ್ಷರು ತಮ್ಮ ಕಾರ್ಯ ಕ್ಷೇತ್ರದ ಬಗ್ಗೆ ಮಾಹಿತಿ ನೀಡಿದರು. ಮುಂದಿನ ಬೆಳವಣಿಗೆಗಳ ಬಗ್ಗೆ ಚರ್ಚಿಸಲಾಯಿತು.

ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಸಿ.ಎನ್.ವೆಂಕಟೇಶ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್, ಪರಿಷತ್ ಪ್ರಧಾನ ಕಾರ್ಯದರ್ಶಿ ಸಿದ್ದೇಶ್, ಸಹ ಕಾರ್ಯದರ್ಶಿ ಸಿ.ಎಸ್.ಮನೋಹರ್, ಸಂಘಟನಾ ಕಾರ್ಯದರ್ಶಿ ಸಚಿನ್, ಉಪಾಧ್ಯಕ್ಷ ಜಗದೀಶ್, ಜಿಲ್ಲಾಧ್ಯಕ್ಷ ಗಂಗಾಧರ್, ತಾಲ್ಲೂಕು ಅಧ್ಯಕ್ಷ ನಾಗೇಶ್, ಖಜಾಂಚಿ ಲತಾ ಇತರರಿದ್ದರು.

# ಮತದಾರರ ಋಣ ತೀರಿಸುವುದು ನನ್ನ ಜವಾಬ್ದಾರಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಮತ ನೀಡಿ ಚುನಾವಣೆಯಲ್ಲಿ ಗೆಲುವು ಸಾಧಿಸಲು ಕಾರಣರಾದ ಸಾರ್ವಜನಿಕರ ಋಣ ತೀರಿಸುವುದು ನನ್ನ ಜವಾಬ್ದಾರಿ. ಅನುದಾನಕ್ಕಾಗಿ ಸರ್ಕಾರದೊಂದಿಗೆ ಸಂಘರ್ಷ ಮಾಡಲು ನಾನು ಸಿದ್ಧನಿದ್ದೇನೆಂದು ಶಾಸಕ ಹೆಚ್.ಕೆ.ಸುರೇಶ್ ಹೇಳಿದರು.

ಸನ್ಯಾಸಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಲಕ್ಷೀಪುರ ಹಾಗೂ ಪ್ರಸಾದಿಹಳ್ಳಿಯಲ್ಲಿ ಕಾಂಕ್ರಿಟ್ ರಸ್ತೆ ಉದ್ಘಾಟಿಸಿ ಮಾತನಾಡಿದ ಅವರು, ಲೋಕೋಪಯೋಗಿ ಇಲಾಖೆಯಿಂದ ಸುಮಾರು 68 ಲಕ್ಷ ರೂ. ವೆಚ್ಚದಲ್ಲಿ 395 ಮೀಟರ್ ಉದ್ದದ ಕಾಂಕ್ರಿಟ್ ರಸ್ತೆ ನಿರ್ಮಿಸಲಾಗಿದೆ.

ಗ್ರಾಮೀಣ ಭಾಗಕ್ಕೆ ಮೂಲಸೌಕರ್ಯ ಒದಗಿಸುವುದು ನಮ್ಮ ಕರ್ತವ್ಯ. ಹಳ್ಳಿಗಳ ಉದ್ದಾರವಾಗದೆ ದೇಶ ಉದ್ದಾರವಾಗದು. ಹಳ್ಳಿಗಳ ಉದ್ಧಾರಕ್ಕೆ ನಾನು ಸರ್ಕಾರದ ಜೊತೆ ಸಂಘರ್ಷಕ್ಕೂ ಸಿದ್ದ ಎಂದರು.

ತಾಲ್ಲೂಕಿನ ಮತದಾರರು ನನ್ನ ಮೇಲೆ ನಂಬಿಕೆ ಇಟ್ಟು ಮತ ನೀಡಿದ್ದಾರೆ. ಅವರ ಕನಸನ್ನು ನನಸು ಮಾಡಬೇಕಾದುದ್ದು ನನ್ನ ಜವಾಬ್ದಾರಿ. ಹಲವಾರು ವರ್ಷಗಳಿಂದ ಲಕ್ಷೀಪುರ ಹಾಗೂ ಪ್ರಸಾದಿಹಳ್ಳಿ ರಸ್ತೆ ಹದಗೆಟ್ಟಿತ್ತು. ಚುನಾವಣೆ ಮೊದಲು ಸನ್ಯಾಸಿಹಳ್ಳಿ ವ್ಯಾಪ್ತಿಯ ಮತದಾರ ಪ್ರಭುಗಳು ರಸ್ತೆ ಸರಿಪಡಿಸಬೇಕೆಂದು ಮನವಿ ಮಾಡಿದ್ದರು. ಈಗ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇನೆ. ಬೇಲೂರು ತಾಲ್ಲೂಕಿನ ಅಭಿವೃದ್ಧಿಗಾಗಿ ಸಂಬಂಧಪಟ್ಟ ಸಚಿವರ ಭೇಟಿ ಮಾಡಿ ಅನುದಾನ ತರುತ್ತಿದ್ದೇನೆಂದರು.

ಸನ್ಯಾಸಿಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ವೆಂಕಟೇಶ್, ಶ್ರೀಧರ್, ಖಾದರ್, ರವಿ, ಉಪ್ಪಾರ ಸಂಘದ ತಾಲ್ಲೂಕು ಅಧ್ಯಕ್ಷ ಸುರೇಶ್ ಘಟ್ಟದಳ್ಳಿ, ಕಾರ್ಯದರ್ಶಿ ವಸಂತಕುಮಾರ್, ಸನ್ಯಾಸಿಹಳ್ಳಿ ಕೃಷಿ ಪತ್ತಿನ ಸಹಕಾರ ಬ್ಯಾಂಕ್ ಸದಸ್ಯ ಅಣ್ಣಪ್ಪ, ಜಯಮೂರ್ತಿ ಇತರರಿದ್ದರು.

# 4.50 ಲಕ್ಷ ರೂ. ಬೆಲೆಯ ಚಿನ್ನಾಭರಣ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಬಸ್ ಹತ್ತುತ್ತಿದ್ದಾಗ ಮಹಿಳೆ ಗಮನಕ್ಕೆ ಬಾರದಂತೆ ಬ್ಯಾಗ್‌ನಲ್ಲಿದ್ದ 4.50 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ಬಸ್ ನಿಲ್ದಾಣದಲ್ಲಿ ನಡೆದಿದೆ.

ಹಾಸನದ ವಿವೇಕ ನಗರ ನಿವಾಸಿ ರತ್ನಬಾಯಿ ಚಿನ್ನಾಭರಣ ಕಳೆದುಕೊಂಡವರು. ಅವರು ಅ. 24 ರಂದು ಹಾಸನಕ್ಕೆ ತೆರಳುವ ಬಸ್ ಹತ್ತುತ್ತಿದ್ದಾಗ ಘಟನೆ ನಡೆದಿದೆ. ಬಸ್ ನಿರ್ವಾಹಕ ಟಿಕೆಟ್ ಕೊಡಲೆಂದು ಬಂದಾಗ ಆಧಾರ್ ಕಾರ್ಡ್ ತೋರಿಸಲು ಬ್ಯಾಗ್ ಪರಿಶೀಲಿಸಿದಾಗ ಚಿನ್ನಾಭರಣ ಕಳುವಾಗಿರುವುದು ಗೊತ್ತಾಗಿದೆ. ನೂಕಾಟದಲ್ಲಿ ಯಾರೋ ಕಳ್ಳರು 15 ಗ್ರಾಂ ತೂಕದ ಚಿನ್ನದ ಜುಮುಕಿ ಓಲೆ, 19 ಗ್ರಾಂ ತೂಕದ ಚಿನ್ನದ ಸರ, 12 ಗ್ರಾಂ ತೂಕದ ಮಗುವಿನ ಚಿನ್ನದ ಸರ ಕಳವು ಮಾಡಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ದೇವಾಲಯ ಬೀಗ ಮುರಿದು ಕಳ್ಳತನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ದೇವಸ್ಥಾನ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 1.30 ಲಕ್ಷ ರೂ. ಬೆಲೆಯ ಚಿನ್ನ ಹಾಗು ಬೆಳ್ಳಿ ಸಾಮಾಗ್ರಿಗಳನ್ನು ಕಳವು ಮಾಡಿರುವ ಘಟನೆ ತಾಲ್ಲೂಕಿನ ಮಡಬ ಗ್ರಾಮದಲ್ಲಿ ನಡೆದಿದೆ.

ಊರಿನ ಬೆಂಕಿ ಆಂಜನೇಯಸ್ವಾಮಿ ದೇವಾಲಯಕ್ಕೆ ಅ. 17ರ ರಾತ್ರಿ ಪ್ರವೇಶಿಸಿರುವ ಕಳ್ಳರು ದೇವಸ್ಥಾನದ ಬಾಗಿಲ ಬೀಗ ಮುರಿದು ದೇವರ ಮುಖಕ್ಕೆ ಹಾಕಿದ್ದ ಬೆಳ್ಳಿ ಮುಖವಾಡ, 1-1/4 ಕೆಜಿ, ಬೆಳ್ಳಿ ಲಿಂಗ ಮತ್ತು ಬೆಳ್ಳಿ ಪಟ್ಟಿ 200 ಗ್ರಾಂ, 4 ಬೆಳ್ಳಿ ಛತ್ರಿ 300 ಗ್ರಾಂ, 10 ಗ್ರಾಂ ಇರುವ 2 ಚಿನ್ನದ ಓಲೆ, 10 ಗ್ರಾಂನ ಮೂಗುನತ್ತು ಕಳವು ಮಾಡಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಅಕ್ಟೋಬರ್-28

**1636:** ಅಮೆರಿಕದ ಪ್ರಸಿದ್ಧ ಹಾರ್ವರ್ಡ್ ವಿಶ್ವವಿದ್ಯಾಲಯ ಸ್ಥಾಪನೆ.
**1886:** ನ್ಯೂಯಾರ್ಕ್‌ನಲ್ಲಿ ಸ್ಟ್ಯಾಚ್ಯೂ ಆಫ್ ಲಿಬರ್ಟಿ ಪ್ರತಿಮೆ ಉದ್ಘಾಟನೆ.
**1919:** ಅಮೆರಿಕದಲ್ಲಿ ಮದ್ಯಪಾನದ ನಿಷೇಧ ಕಾಯ್ದೆ ಅಂಗೀಕಾರ.
**1922:** ಬೆನಿಟೋ ಮುಸೋಲಿನಿ ನೇತೃತ್ವದ ಫಾಸಿಸ್ಟ್ ಪಕ್ಷ ಇಟಲಿಯಲ್ಲಿ ಅಧಿಕಾರಕ್ಕೇರಿತು.
**1940:** ದ್ವಿತೀಯ ವಿಶ್ವಯುದ್ಧದ ವೇಳೆ ಇಟಲಿ ಗ್ರೀಸ್ ಮೇಲೆ ದಾಳಿ ನಡೆಸಿತು.

**ಜನನ**


**1466:** ಪ್ರಸಿದ್ಧ ಚಿತ್ರಕಾರ ಎರಾಸ್ಮಸ್ ಆಫ್ ರೋಟರ್‌ಡ್ಯಾಮ್
**1955:** ಮೈಕ್ರೋಸಾಫ್ಟ್ ಸಂಸ್ಥಾಪಕ ಬಿಲ್ ಗೇಟ್ಸ್
**1967:** ಭಾರತೀಯ ಕ್ರಿಕೆಟ್ ಆಟಗಾರ ವಿ.ವಿ.ಎಸ್. ಲಕ್ಷ್ಮಣ್

**ಮರಣ**

**1704:** ಇಂಗ್ಲಿಷ್ ತತ್ತ್ವಜ್ಞ ಜಾನ್ ಲಾಕ್
**1953:** ಫ್ರೆಂಚ್ ಕಲಾವಿದ ಎವ್ ಮೊಂಟ್‌ಮೌರ್ಟ್

# ಸಂಜೀವಿನಿ ಸಹಕಾರಿ ಸಂಸ್ಥೆ ಚುನಾವಣೆ ಶಾಸಕ ಸ್ವರೂಪ್ ಬಣದ ಗೆಲುವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ನಗರದ ಸಂಜೀವಿನಿ ಸಹಕಾರಿ ಆಸ್ಪತ್ರೆ ಹಾಗು ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಆಡಳಿತ ಮಂಡಳಿಗೆ ಭಾನುವಾರ ನಡೆದ ಚುನಾವಣೆಯಲ್ಲಿ ಶಾಸಕ ಹೆಚ್.ಪಿ.ಸ್ವರೂಪ್ ಬಣ ವಿಜಯ ಪತಾಕೆ ಹಾರಿಸಿದೆ.

ಸಂಸ್ಥೆಯ ಆಡಳಿತ ಮಂಡಳಿಯ ಸಾಮಾನ್ಯ 3, ಪರಿಶಿಷ್ಟ ಜಾತಿ 1 ಹಾಗೂ ವೈದ್ಯಕೀಯ ಕ್ಷೇತ್ರದ 1 ಸ್ಥಾನ ಸೇರಿ ಒಟ್ಟು 5 ಸ್ಥಾನಗಳಿಗೆ ನಗರದ ಎವಿಕೆ ಕಾಲೇಜಿನಲ್ಲಿ ಮತದಾನ ನಡೆಯಿತು. ಶಾಸಕ ಹೆಚ್.ಪಿ.ಸ್ವರೂಪ್ ಬಣದ ನಾಲ್ವರು ಅಭ್ಯರ್ಥಿಗಳು ವಿಜೇತರಾಗಿದ್ದಾರೆ. ಒಟ್ಟು 370 ಮತದಾರರಿದ್ದು ಎಲ್ಲರೂ ತಮ್ಮ ಹಕ್ಕು ಚಲಾಯಿಸಿದ್ದಾರೆ. ವಿವಿಧ ಕ್ಷೇತ್ರದ ಒಟ್ಟು 5 ಸ್ಥಾನಗಳಿಗೆ 9 ಮಂದಿ ಸ್ಪರ್ಧೆ ಮಾಡಿದ್ದರು. ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ಡಿ.ಅರುಣ್ ಕುಮಾರ್ 255 ಮತ ಪಡೆದಿದ್ದಾರೆ. ಬಿ.ಜಿ.ಶ್ರೀಧರ್ 217 ಮತ ಪಡೆದು ಗೆಲುವು ಕಂಡಿದ್ದಾರೆ. ಹೆಚ್.ಆರ್.ಸುರೇಶ್ 228 ಮತ್ತು ವೈದ್ಯಕೀಯ ಕ್ಷೇತ್ರದಿಂದ ಡಾ. ಜಿ.ಕಾವ್ಯಶ್ರೀ 34 ಮತ (ಒಟ್ಟು 54 ಮತಗಳಿವೆ) ಪಡೆದಿದ್ದಾರೆ ಹಾಗು ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿದ್ದ ಹೆಚ್.ಸುರೇಶ್ 196 ಮತ ಪಡೆದು ಗೆಲುವು ತಮ್ಮದಾಗಿಸಿಕೊಂಡಿದ್ದಾರೆ. ಚುನಾವಣೆಯಲ್ಲಿ ವಿಜೇತರಾದ ಅಭ್ಯರ್ಥಿಗಳಿಗೆ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಹೂ ಮಾಲೆ ಹಾಕಿ, ಸಿಹಿ ತಿನ್ನಿಸಿ ಅಭಿನಂದಿಸಿದರು. ಅಭಿಮಾನಿಗಳು ಪಟಾಕಿ ಸಿಡಿಸಿ ಸಂಭ್ರಮಾಚರಿಸಿದರು.

# ಸಿಐಟಿಯು ರಾಜ್ಯ ಸಮ್ಮೇಳನ: ನಿಧಿ ಸಂಗ್ರಹ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಹಾಸನದಲ್ಲಿ ಹಮ್ಮಿಕೊಂಡಿರುವ ಸಿಐಟಿಯು 16ನೇ ರಾಜ್ಯ ಸಮ್ಮೇಳನದ ಯಶಸ್ಸಿಗೆ ಸಾರ್ವಜನಿಕರ ಸಹಾಯ ಕೋರಿ ತಾಲ್ಲೂಕಿನ ಹಿರೀಸಾವೆಯಲ್ಲಿ ಸಿಐಟಿಯು ಸದಸ್ಯರು ನಿಧಿ ಸಂಗ್ರಹ ಜಾಥಾ ನಡೆಸಿದರು.

ತಾಲ್ಲೂಕಿನ ಹಿರೀಸಾವೆ ಗ್ರಾಮದ ಶ್ರೀಕಂಠಯ್ಯ ವೃತ್ತದ ಚೌಡೇಶ್ವರಿ ಮಹಾದ್ವಾರದ ಬಳಿಯಿಂದ ಮೆರವಣಿಗೆ ಪ್ರಾರಂಭವಾಗಿ ಶ್ರವಣಬೆಳಗೊಳ ರಸ್ತೆ, ಬಿ.ಎಂ.ರಸ್ತೆ, ಗ್ರಾಮ ಪಂಚಾಯಿತಿ ರಸ್ತೆ ಸೇರಿದಂತೆ ವಿವಿಧ ಬೀದಿಗಳಲ್ಲಿ ಸಾಗಿತು.

ನ. 13ರಿಂದ 15ರ ವರೆಗೆ ಮೂರು ದಿನಗಳ ರಾಜ್ಯ ಸಮ್ಮೇಳನ ಹಾಸನದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆಯಲಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಅಂಗನವಾಡಿ, ಗ್ರಾಮ ಪಂಚಾಯಿತಿ, ಬಿಸಿಯೂಟ, ವಿದ್ಯಾರ್ಥಿ ನಿಲಯ, ಆಸ್ಪತ್ರೆ ಮತ್ತು ಖಾಸಗಿ ಕಂಪನಿಯಲ್ಲಿ ಹೊರಗುತ್ತಿಗೆಯಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಮತ್ತು ವಿವಿಧ ಅಸಂಘಟಿತ ಕಾರ್ಮಿಕರು ಮತ್ತು ಸಂಘಗಳ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಮ್ಮೇಳನದ ಯಶಸ್ಸಿಗೆ ಆರ್ಥಿಕ ಸಹಾಯ ಮಾಡುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಲಾಗುತ್ತಿದೆ ಎಂದು ಸಿಐಟಿಯು ಹಿರೀಸಾವೆ ಹೋಬಳಿ ಘಟಕದ ಅಧ್ಯಕ್ಷ ಜಯಶಂಕರ್ ಹೇಳಿದರು.

ಜಾಥಾದ ನೇತೃತ್ವವನ್ನು ಹೋಬಳಿಯ ಗ್ರಾಮ ಪಂಚಾಯಿತಿ ಸಿಬ್ಬಂದಿ ವಹಿಸಿದ್ದರು. ಜಿಲ್ಲಾ ಮತ್ತು ತಾಲ್ಲೂಕಿನ ಸಿಐಟಿಯು ಸಂಘಟನೆಯ ಪದಾಧಿಕಾರಿಗಳು ಭಾಗವಹಿಸಿದ್ದರು.

# ಸಂಘಟನಾತ್ಮಕವಾಗಿ ದಲಿತ ಪರಿಷತ್ ವಿಫಲ: ಬೇಸರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ದಲಿತ ಸಾಹಿತ್ಯ ಪರಿಷತ್‌ಗೆ 500 ವರ್ಷಗಳ ಇತಿಹಾಸ ಇದ್ದರೂ, ಸಂಘಟನಾತ್ಮಕವಾಗಿ ಹಿಂದೆ ಉಳಿದಿರುವುದು ಬೇಸರದ ಸಂಗತಿ ಎಂದು ಹಿರಿಯ ಸಾಹಿತಿ ಗುರುಮೂರ್ತಿ ಬೇಸರ ವ್ಯಕ್ತಪಡಿಸಿದರು.

ದಲಿತ ಸಾಹಿತ್ಯ ಪರಿಷತ್ ರಾಜ್ಯ ಹಾಗೂ ಜಿಲ್ಲಾ ಘಟಕದ ವತಿಯಿಂದ ನಗರದ ಸ್ವಾಭಿಮಾನಿ ಭವನದಲ್ಲಿ ಏರ್ಪಡಿಸಿದ್ದ ದಲಿತ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಉದ್ಘಾಟನಾ ಸಮಾರಂಭ ಉದ್ಘಾಟಿಸಿ ಮಾತನಾಡಿ, ಸಾಹಿತ್ಯಾತ್ಮಕವಾಗಿ ದಲಿತರ ಬದುಕು ಭಾವನೆಗಳನ್ನು ಬರವಣಿಗೆ ಮೂಲಕ ಸಮಾಜಕ್ಕೆ ತಿಳಿಸುವ ಸಲುವಾಗಿ ರೂಪುಗೊಂಡ ದಲಿತ ಸಾಹಿತ್ಯ ಪರಿಷತ್ ಇಂದಿಗೂ ತನ್ನ ಅಸ್ತಿತ್ವ ಉಳಿಸಿ ಕೊಳ್ಳುವಲ್ಲಿ ಹರಸಾಹಸ ಪಡುವಂತಾಗಿದೆ. ಇದಕ್ಕೆ ಶಕ್ತಿ ತುಂಬಲು ಸಂಘಟನೆ ಬಹಳ ಮುಖ್ಯ ಎಂದರು.

ದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದಲಿತ ಸಮುದಾಯ ಇದ್ದರೂ ಇದುವರೆಗೂ ರಾಜಕೀಯವಾಗಿ ಹಾಗೂ ಯಾವುದೇ ಕ್ಷೇತ್ರದಲ್ಲಿ ಉನ್ನತ ಸ್ಥಾನಕ್ಕೆ ಏರಲು ಸಾಧ್ಯವಾಗಿಲ್ಲ ಇದಕ್ಕೆ ಸಂಘಟನಾತ್ಮಕವಾಗಿ ಹಿಂದೆ ಉಳಿದಿರುವುದೇ ಕಾರಣ ಎಂದರು.

ಜಿಲ್ಲೆಯಲ್ಲಿ ದಲಿತ ಸಾಹಿತ್ಯ ಪರಿಷತ್ ಜವಾಬ್ದಾರಿಯನ್ನು ಓರ್ವ ಮಹಿಳೆ ಹೆಗಲಿಗೆ ಹಾಕಿದ್ದು, ಅವರಿಗೆ ಬೆಂಬಲವಾಗಿ ಎಲ್ಲರೂ ನಿಲ್ಲುವ ಮೂಲಕ ಸಹಕಾರ ನೀಡುವ ಅಗತ್ಯವಿದೆ ದಲಿತ ಸಾಹಿತ್ಯ ಪರಿಷತ್ ಅನ್ನು ಇನ್ನಷ್ಟು ಗಟ್ಟಿಗೊಳಿಸುವ ಸಲುವಾಗಿ ಎಲ್ಲರೂ ಒಂದಾಗಬೇಕಿದೆ ಎಂದರು

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248